ಮಕ್ಕಳಿಗಾಗಿ ಬೈಬಲ್
ಅರ್ಪಿಸುವ

# ಪ್ರೀಯ ಮಗನು ಗುಲಾಮನಾದನು



ಬರಹಗಾರರು: Edward Hughes

ಚಿತ್ರಲೇಖಕರು: Byron Unger; Lazarus

ಅಳವಡಿಸುವವರು: M. Kerr; Sarah S.

ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2015 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಯಾಕೋಬನು ತನ್ನ ತಂದೆಯಾದ ಇಸಾಕನ ಮನೆಗೆ ಬಂದನು. ಏಸಾವನು ಯಾಕೋಬನನ್ನು ಕೊಲ್ಲುವುದಾಗಿ ಒಂದು ಸಾರಿ ನಿರ್ಧರಿಸಿಕೊಂಡಿದ್ದನು.



ಆದರೆ ಏಸಾವನು ಯಾಕೋಬನನ್ನು ಮನೆಗೆ ಬರಮಾಡಿಕೊಂಡ ರೀತಿಯನ್ನು ನೋಡಿ ಇಸಾಕನು ಬಹಳ ಸಂತೋಷಪಟ್ಟನು, ...



... ಆದರೆ ಯಾಕೋಬನ ಮಕ್ಕಳು ಸಂತೋಷಪಡಲಿಲ್ಲ ಯಾಕೆಂದರೆ ಅವರ ಕೊನೆಯ ಮಗನಾದ ಯೋಸೇಫನನ್ನು ಯಾಕೋಬನು ಹೆಚ್ಚಾಗಿ ಪ್ರೀತಿಸುತ್ತಿದ್ದನು.



ಒಂದು ದಿನ ಯೋಸೇಫನು ತನ್ನ ಕನಸನ್ನು ಅಣ್ಣಂದಿರಿಗೆ ವಿವರಿಸುತ್ತಿದ್ದನು, ಅದೇನೆಂದರೆ "ನಾವು ಹೊಲದಲ್ಲಿ ಸಿವುಡುಗಳನ್ನು ಕಟ್ಟುತ್ತಾ ಇದ್ದೆವು ಆಗ ನನ್ನ ಸಿವುಡು ಎದ್ದು ನಿಲ್ಲಲು, ನಿಮ್ಮ ಸಿವುಡುಗಳು ಸುತ್ತಲೂ ಬಂದು, ನನ್ನ ಸಿವುಡಿಗೆ ಅಡ್ಡ ಬಿದ್ದದ್ದನ್ನು ಕಂಡೆನು" ಎಂದು ಹೇಳಿದನು.



ಇದನ್ನು ಕೇಳಿ ಅವರು ಇನ್ನೂ ಹೆಚ್ಚಾಗಿ ದ್ವೇಷಿಸಿದರು. ಆ ಕನಸು ಯೋಸೇಫಿಗೆ ತನ್ನ ಅಣ್ಣಂದಿರಿಗಿಂತ ಅಧಿಕ ಪ್ರಾಮುಖ್ಯವಾಯಿತು.





ಯೋಸೇಪನ ಎರಡನೆ
ಕನಸು– ಅದರಲ್ಲಿ
ಸೂರ್ಯಚಂದ್ರರೂ
ನಕ್ಷತ್ರಗಳೂ ಅವನಿಗೆ
ಅಡ್ಡಬಿದ್ದವು ಎಂದು
ಹೇಳಿದನು.



ಆಗ ಯಾಕೋಬನು
ಕೋಪದಿಂದ ನಾನೂ
ನಿನ್ನ ತಾಯಿಯೂ
ಅಣ್ಣತಮ್ಮಂದಿರೂ ನಿನ್ನ
ಮುಂದೆ ಅಡ್ಡ ಬೀಳುವದಕ್ಕೆ
ಬಂದೇವ್ರೋ? ಎಂದು
ಹೇಳಿ ಗದರಿಸಿದನು.

ಒಂದು ದಿನ ಯಾಕೋಬನು ಯೋಸೇಫನನ್ನು ಕರೆದು.
ನೀನು ಹೋಗಿ ನಿನ್ನ ಅಣ್ಣಂದಿರ ಯೋಗಕ್ಷೇಮವನ್ನೂ
ಆಡುಕುರಿಗಳ ಯೋಗಕ್ಷೇಮವನ್ನೂ ವಿಚಾರಿಸಿಕೊಂಡು ಬಾ
ಎಂದು ಅಪ್ಪಣೆ ಕೊಟ್ಟು
ಕಳುಹಿಸಿದನು.



ಅವನ ಅಣ್ಣಂದಿರು ಯೋಸೇಫ ಬರುವುದನ್ನು ನೋಡಿದರು ಆ ಕನಸಿನವನು ಬರುತ್ತಿದ್ದಾನೆ ಅವನನ್ನು ಕೊಲ್ಲೋನವೆಂದು ಒಳಸಂಚು ಮಾಡಿದರು. ಅದರೆ ಮುಂದೆ ಯೋಸೇಫನಿಗೆ ಅಪಾಯವಿದೆ ಎಂದು ತಿಳಿಯಲಿಲ್ಲ.



ಹಿರಿಯ ಅಣ್ಣನಾದ ರೊಬೇನನು ಅವರ ಮಾತನ್ನು ಅಂಗಿಕರಿಸಲಿಲ್ಲ, ...



... "ನಾವು ಅವನ ಪ್ರಾಣವನ್ನು ತೆಗೆಯಬಾರದು,
ಅವನನ್ನು ಕಾಡಿನಲ್ಲಿರುವ ಈ ಗುಂಡಿಯೊಳಗೆ ಹಾಕೋಣ
ಅವನು ಅಲ್ಲೆ ಸಾಯಲಿ" ಎಂದು ಹೇಳಿ ರೊಬೇನನು
ಯೋಸೇಫನನ್ನು ಅವರ
ಕೈಯಿಂದ ತಪ್ಪಿಸಿದನು.



ಯೋಸೇಫನು
ಹತ್ತಿರಕ್ಕೆ ಬಂದಾಗ
ತನ್ನ ಅಣ್ಣಂದಿರು, ...



... ಅವರ ತಂದೆ
ಯೋಸೇಫನಿಗೆ
ಪ್ರತ್ಯಕವಾಗಿ
ಮಾಡಿಸಿದ
ನಿಲುವಂಗಿಯನ್ನು
ಕಿತ್ತುಕೊಂಡು
ಅವನನ್ನು ಹಿಡಿದು
ಆ ಗುಂಡಿಯೊಳಗೆ
ಹಾಕಿದರು.



ರೊಬೇನನು ಇಲ್ಲದಿರುವಾಗ,
ಇಷ್ಮಾಯೇಲ್ಯರ ಗುಂಪು ಒಂಟ್ಟೆಗಳ
ಮೇಲೆ ಬರುವದನ್ನು ಕಂಡರು,
ಅವರು ಐಗುಪ್ತ ದೇಶಕ್ಕೆ ಪ್ರಯಾಣ





ಮಾಡುತ್ತಿದ್ದರು.

ಇದನ್ನು ನೋಡಿ ಯೆಹೂದನು
‘ನಾವು ನಮ್ಮ ತಮ್ಮನನ್ನು
ಅವರಿಗೆ ಮಾರಿಬಿಡೋಣ’
ಎಂದು ಕೂಗಿದನು.



ಅವನ ಮಾತಿಗೆ ಒಪ್ಪಿಕೊಂಡು ಯೋಸೇಫನನ್ನು ಇಪ್ಪತ್ತು ಬೆಳ್ಳಿನಾಣ್ಯಗಳಿಗೆ ಇಷ್ಮಾಯೇಲ್ಯರಿಗೆ ಮಾರಿ ಬಿಟ್ಟರು.





ಕಣ್ಣೀರಿನಿಂದ, ಭಯದಿಂದ ಅಸಹಾಯಕನಾಗಿ ಯೋಸೇಫನು ತನ್ನ ಕುಟುಂಬದಿಂದ ಹಾಗೂ ಸ್ವದೇಶದಿಂದ ದೂರಹೋದನು.





ಈ ಅಂಗಿ
ಯೋಸೇಫನದೋ?
ಅಂಗಿ ರಕ್ತದಿಂದ
ತುಬಿಂತ್ತು ನಾವು
ಈ ಅಂಗಿಯನ್ನು
ಕಾಡಿನಲ್ಲಿ ಕಂಡೆವು.



ಆ ಕೆಟ್ಟ ಅಣ್ಣಂದಿರು, ಯೋಸೇಫನನ್ನು
ಕಾಡು ಮೃಗವು ಕೊಂದು ತಿಂದಿರಬಹುದು
ಎಂದು ಯಾಕೋಬನನ್ನು ನಂಬಿಸಿದರು.

ಯಾಕೋಬನು ದು:ಖದಿಂದ
ಗೋಳಾಡಿ ತನ್ನ ಬಟ್ಟೆಯನ್ನು
ಹರಿದುಕೊಂಡನು.
ಅವನನ್ನು ಸಂತೈಸಲು
ಯಾರಿಂದಲೂ ಆಗಲಿಲ್ಲ.



ಐಗುಪ್ತ ದೇಶದಲ್ಲಿ
ಯೋಸೇಫನು
ಒಬ್ಬಂಟಿಗನಾಗಿ
ಭಯಪಟ್ಟಿರಬಹುದು.



ಬಹುಶ: ಮನೆಗೆ ಹೋಗಬೇಕು ಅಂತ
ಅನಿಸಿರಬಹುದು ಆದರೆ ಅವನಿಗೆ ತಪ್ಪಿಸಿಕೊಳಲು
ಆಗಲಿಲ್ಲ, ಯೋಸೇಫನು
ಪೋಟೀಫರನ
ದೃಷ್ಟಿಯಲ್ಲಿ ಕಷ್ಟಪಟ್ಟು
ಕೆಲಸಮಾಡುವವನು ಹಾಗೂ
ನಂಬಿಗಸ್ತನಾಗಿಯೂ ಕಾಣಿಸಿದನು.

ಒಂದು ದಿನ ಪೋಟೇಫರನು
"ನೀನು ಏನೇ ಕೆಲಸ ಮಾಡಿದರು
ಸಫವಾಗುತ್ತದೆ ಯೆಹೋವನು
ನಿನ್ನ ಜೋತೆ
ಇದ್ದಾನೆ, ...



... ನಿನ್ನನ್ನು ನನ್ನ ಸ್ವಂತ
ಸೇವಕನನ್ನಾಗಿ ಹಾಗೂ ನನ್ನ ಎಲ್ಲಾ
ಆಸ್ತಿ ಹಾಗೂ ಕೆಲಸಗಾರರ ಮೇಲೆ
ಒಡೆಯನನ್ನಾಗಿ ನೇಮಿಸುತ್ತೇನೆ"
ಎಂದು
ಯೋಸೇಫನಿಗೆ
ಹೇಳಿದನು.



ದೇವರು ಯೋಸೇಫನ ದೆಸೆಯಿಂದ
ಪೋಟೀಫರನಿಗೆ ಒಳ್ಳೆ
ಫಲವನ್ನು ಹಾಗೂ ಬಹು
ಧನವನ್ನು ಕೊಟ್ಟನು.



ಈಗ ಯೋಸೇಪನು ಮುಖ್ಯವಾದ ವ್ಯಕ್ತಿಯಾದ,
ದೇವರನ್ನು ಇನ್ನೂ ಹೆಚ್ಚಾಗಿ ನಂಬಿಗಸ್ತಿಕೆಯಿಂದ
ದೇವರನ್ನು ಸೇವಿಸಿದನು,
ಆದರೆ ಯೋಸೇಫನಿಗೆ
ತೊಂದರೆಗಳು ಬಂದವು.



ಪೋಟಿಫರನ ಹೆಂಡತಿಯು ಒಬ್ಬ ದುಷ್ಟ ಹೆಂಗಸಾಗಿದ್ದಳು, ಯೋಸೇಫನಿಗೆ ಅವಳ ಗಂಡನ ಸ್ಥಾನವನ್ನು ತೆಗೆದುಕೊಳ್ಳಲು ಕೇಳಿಕೊಂಡಳು.



ಆದರೆ ಯೋಸೇಫನು ದೇವರ ವಿರುದ್ಧ ಪಾಪಮಾಡಲು ಇಚ್ಛಿಸದೆ ಅವಳನ್ನು ತಿರಸ್ಕರಿಸಿದನು.



ಆ ಹೆಂಗಸು ಯೋಸೇಫನನ್ನು ಒತ್ತಾಯಪಡಿಸಿದಳು ಆದರೆ ಅವನು ಓಡಿ ಹೋದನು.

ಆಗ ಅವಳಿಗೆ ಅವನ ಬಟ್ಟೆ ಸಿಕ್ಕಿತು.



ನಿನ್ನ ಸೇವಕನು ನನ್ನನ್ನು ಮಾನಭಂಗ ಮಾಡಬೇಕೆಂದಿದ್ದನು ಇಗೋ ಇಲ್ಲಿದೆ ಅವನ ಬಟ್ಟೆ ಎಂದು ಅವಳ ಗಂಡನಾದ ಪೋಟಿಫರನಿಗೆ ದೂರು ನೀಡಲು, ಆತನಿಗೆ ಸಿಟ್ಟುಬಂತು.



ಬಹುಶ: ಆತನ ಹೆಂಡತಿ ಸುಳ್ಳು ಹೇಳುತ್ತಿದ್ದಾಳೆ ಎಂದು ಅನಿಸಿರಬಹುದು ಆದರೆ ಘೋಟೀಫರನು ಏನಾದರು ಮಾಡಬೇಕ್ಕಿತ್ತು. ಅವನು ಏನು ಮಾಡಬಹುದು?



ಪೋಟೀಫರನು
ಯೋಸೇಫನನ್ನು ಹಿಡಿಸಿ
ಸೆರೆಮನೆಗೆ ಹಾಕಿಸಿದನು.



ಅವನು

ನಿರ್ದೋಷಿಯಾಗಿದ್ದನು,

ಅವನಿಗೆ ಯಾವ ಕೋಪವು

ಹಾಗೂ ನೋವು

ಇರಲಿಲ್ಲ.



ಬಹುಶ: ಯೋಸೇಪನು
ತನ್ನ ಕಷ್ಟ ನಷ್ಟಗಳಿಂದ
ಕಲಿಯುತ್ತಿದನು.



ಎಲ್ಲೇ ಇರಲಿ ಅವನು
ದೇವರನ್ನು ಘನಪಡಿಸಿದನು
ಹಾಗೆಯೇ ದೇವರು ಸಹ
ಅವನನ್ನು ಸೆರೆಮನೆಯಲ್ಲಿಯೂ
ಘನಪಡಿಸಿದನು.



# ಪ್ರೀಯ ಮಗನು ಗುಲಾಮನಾದನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಆದಿಕಾಂಡ 37, ಆದಿಕಾಂಡ 39

"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."
ಕೀರ್ತನೆ 119:130

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು
ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು.
ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ
ದೇವರೊಂದಿಗೆ ಮಾತಾಡು!
ಯೋಹಾನ 3:16